ಕರ್ನಾಟಕ ಸರ್ಕಾರ

ನಂ. ಕಂಇ 78 ಎಂಆರ್ಆರ್ 2008

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ: 17/4/2009

# ಸುತ್ತೋಲೆ

ವಿಷಯ: ಭೂಮಿ-ಪಹಣಿ ಪತ್ರಿಕೆಗಳಲ್ಲಿನ ಲೋಪದೋಷಗಳನ್ನು ಸರಿಪಡಿಸುವ ಅಧಿಕಾರವನ್ನು ತಹಸೀಲ್ದಾರಿಗೆ ಪ್ರತ್ಯಾಯೋಜಿಸುವುದು ಮತ್ತು ಪಹಣಿ ಸರಿಪಡಿಸುವುದಕ್ಕೆ 31/3/2009 ರವರೆಗೆ ಅಂತಿಮ ಅವಕಾಶ ಕಲ್ಪಿಸುವುದು ಕುರಿತು.

ಉಲ್ಲೇಖ:
1. ಸರ್ಕಾರದ ಸಮಸಂಖ್ಯೆ ಸುತ್ತೋಲೆ ದಿನಾಂಕ 23.9.2008.
2. ಸರ್ಕಾರದ ಸುತ್ತೋಲೆ ಸಂ.78 ಎಂಆರ್ಆರ್ 2008 ದಿನಾಂಕ: 12/1/2009 ಮತ್ತು 21/2/2009.

***

ಪಹಣಿಗಳನ್ನು ಗಣಕೀಕರಿಸುವ ಸಂದರ್ಭದಲ್ಲಿ ಆಗಿರುವಂತಹ ತಪ್ಪು ನಮೂದನ್ನು ಸರಿಪಡಿಸಲು ಉಲ್ಲೇಖದ ಸರ್ಕಾರದ ಸುತ್ತೋಲೆಯಲ್ಲಿ ವಿವರವಾದ ಮಾರ್ಗದರ್ಶನಗಳನ್ನು ನೀಡಿದ್ದು, ಈ ಕಾರ್ಯಕ್ಕೆ ಅರ್ಜಿಗಳನ್ನು ಸ್ವೀಕರಿಸಲು ದಿನಾಂಕ: 31.1.09 ರವರೆಗೆ ಕಾಲಾವಕಾಶವನ್ನು ಕಲ್ಪಿಸಿಕೊಡಲಾಗಿದ್ದು, ಈ ಅವಧಿಯಲ್ಲಿ ಸ್ವೀಕರಿಸಲ್ಪಟ್ಟ ಅರ್ಜಿಗಳನ್ನು ಪರಿಶೀಲಿಸಿ ವಿಲೇವಾರಿ ಮಾಡಲು 31.3.09 ರವರೆಗೆ ಕಾಲಾವಕಾಶವನ್ನು ನೀಡಲಾಗಿರುತ್ತದೆ. ತದನಂತರ, ಈ ಅವಧಿಯನ್ನು 2 ಬಾರಿ ವಿಸ್ತರಿಸಿದ್ದು, ಅಂತಿಮವಾಗಿ ಅರ್ಜಿಗಳನ್ನು ಸ್ವೀಕರಿಸಲು 31.3.09 ರವರೆಗೆ ಅವಕಾಶ ಕಲ್ಪಿಸಿ, ಈ ಅರ್ಜಿಗಳನ್ನು ಇತ್ಯರ್ಥಪಡಿಸಲು 30.4.09 ರವರೆಗೆ ಅವಕಾಶ ವಿಸ್ತರಿಸಲಾಗಿರುತ್ತದೆ. ಹೀಗಾಗಿ ಈ ವಿವರಗಳನ್ನು ನಮೂದಿಸಲು ಒದಗಿಸಲಾಗಿದ್ದ ತಂತ್ರಾಂಶವು ದಿನಾಂಕ: 31.3.2009 ಕ್ಕೆ ಸ್ಥಗಿತಗೊಂಡಿರುತ್ತದೆ. ಆದ್ದರಿಂದ 31.3.2009 ರ ನಂತರ ಪಹಣಿ ತಿದ್ದುಪಡಿಗಾಗಿ ಅರ್ಜಿಗಳನ್ನು ಸ್ವೀಕರಿಸಲು ಪ್ರಸ್ತುತ ಅವಕಾಶವಿರುವುದಿಲ್ಲ. ಈ ಅವಧಿಯ ಒಳಗಾಗಿ ಸ್ವೀಕರಿಸಲಾದ ಅರ್ಜಿಗಳನ್ನು ದಿನಾಂಕ: 30.4.2009 ರ ಒಳಗಾಗಿ ಇತ್ಯರ್ಥಪಡಿಸಬೇಕಾಗಿರುತ್ತದೆ. ಈ ಅವಧಿಯ ನಂತರ ಯಾವುದೇ ತಿದ್ದುಪಡಿಗಳಿಗೆ ಅವಕಾಶ ಇರುವುದಿಲ್ಲ. ಕಾರಣ, ಈ ಬಗ್ಗೆ ಒದಗಿಸಲಾದ ತಂತ್ರಾಂಶವು ದಿನಾಂಕ: 30.4.2009 ರ ನಂತರ ಕಾರ್ಯ ನಿರ್ವಹಿಸುವುದಿಲ್ಲ.

ಆದ್ದರಿಂದ ಈ ಬಗ್ಗೆ ಸರ್ಕಾರದಿಂದ ತಿಳಿಸಿರುವಂತಹ ಮಾರ್ಗಸೂಚಿಗಳನ್ನು ಅನುಸರಿಸಿ ದಿನಾಂಕ: 30.4.2009 ರ ಒಳಗಾಗಿ ಎಲ್ಲಾ ಅರ್ಜಿಗಳನ್ನು ನಿಯಮಾನುಸಾರ ಇತ್ಯರ್ಥಗೊಳಿಸಲು ಕ್ರಮ ತೆಗೆದುಕೊಳ್ಳತಕ್ಕದ್ದು. ಈ ಅವಧಿಯ ನಂತರ ಯಾವುದೇ ಅರ್ಜಿಗಳು ಬಾಕಿ ಉಳಿದಲ್ಲಿ ಸಂಬಂಧಿಸಿದ ತಹಸೀಲ್ದಾರರನ್ನು ನೇರ ಜವಾಬ್ದಾರರನ್ನಾಗಿಸಿ, ಈ

ಬಗ್ಗೆ ಮಾನ್ಯ ಕಂದಾಯ ಸಚಿವರ ಗಮನಕ್ಕೆ ಬಾಕಿ ಇರುವ ಅರ್ಜಿಗಳ ವಿವರಗಳೊಂದಿಗೆ ವರದಿಯನ್ನು ಸಲ್ಲಿಸಲಾಗುವುದು.

ಅದುದರಿಂದ ಎಲ್ಲಾ ತಹಸೀಲ್ದಾರರು ಈ ಬಗ್ಗೆ ಅಧ್ಯ ಗಮನ ಹರಿಸಿ ನಿಗಧಿತ ಅವಧಿಯಲ್ಲಿ ಸ್ವೀಕರಿಸಲಾದ ಎಲ್ಲಾ ಅರ್ಜಿಗಳನ್ನು ಇತ್ಯರ್ಥಗೊಳಿಸಲು ಕ್ರಮ ತೆಗೆದುಕೊಳ್ಳತಕ್ಕದ್ದು. ಈ ಕಾರ್ಯವನ್ನು ಸಂಬಂಧಿಸಿದ ಜಿಲ್ಲಾಧಿಕಾರಿಗಳು ಹಾಗೂ ಉಪ ವಿಭಾಗಾಧಿಕಾರಿಗಳು ಪರಿಶೀಲಿಸಿ ಸೂಕ್ತ ಮಾರ್ಗದರ್ಶನವನ್ನು ನೀಡತಕ್ಕದ್ದು.

1/4

( ರಾಜೀವ್ ಚಾವ್ಲಾ )
ವಿಶೇಷ ಕಾರ್ಯದರ್ಶಿಗಳು ( ಭೂಮಿ)
ಕಂದಾಯ ಇಲಾಖೆ.

ಪ್ರತಿಯನ್ನು:

1. ಸ್ಟೇಟ್ ಇನ್‌ಫರ್‌ಮ್ಯಾಟಿಕ್ ಅಫೀಸರ್, ಎನ್.ಐ.ಸಿ. ಮೋಡಿಯಂ ಬ್ಲಾಕ್, ಬೆಂಗಳೂರು ರವರಿಗೆ ರವಾನಿಸುತ್ತಾ, ಆರ್.ಟಿ.ಸಿ. ತಿದ್ದುಪಡಿಗೆ ಈಗ ಕೊಟ್ಟಿರುವ ತಂತ್ರಾಂಶವನ್ನು ದಿನಾಂಕ: 30.4.2009 ರ ನಂತರ ಬ್ಲಾಕ್ ಮಾಡಲು ಕೋರಿದೆ.
2. ಎಲ್ಲಾ ಪ್ರಾದೇಶಿಕ ಅಯುಕ್ತರುಗಳಿಗೆ.
3. ಎಲ್ಲಾ ಜಿಲ್ಲಾಧಿಕಾರಿಗಳಿಗೆ.
4. ಎಲ್ಲಾ ಉಪ ವಿಭಾಗಾಧಿಕಾರಿಗಳಿಗೆ.
5. ಎಲ್ಲಾ ತಹಸೀಲ್ದಾರರುಗಳಿಗೆ.